V.M.S.R. Vastrad Arts Science and Commerce College
HUNGUND

**ಸೇವೆ ಸಾರ್ಥಕವಾಗುವಂತಿರಬೇಕು : ಡಾ.ಮಹಾಂತೇಶ ಕಡಪಟ್ಟಿ**

ಹುನಗುಂದ: ಸ್ಥಳೀಯ ವಿ.ಎಂ.ಎಸ್.ಆರ್.ವಸ್ತ್ರದ ಮಹಾವಿದ್ಯಾಲಯದಲ್ಲಿ ಸೇವಾವಯೋನಿವೃತ್ತರಾದ ಪ್ರೊ.ಬಿ.ಬಿ.ಕಡ್ಲಿ ಕನ್ನಡ ವಿಭಾಗ ಇವರನ್ನು ಸನ್ಮಾನಿಸಿ ಮಾತನಾಡಿದ ಅವರು ಶಿಕ್ಷಕ ವೃತ್ತಿಯು ಅತ್ಯಂತ ಪವಿತ್ರವಾದುದು, ಶಿಕ್ಷಕರು ತಮ್ಮ ವಿಷಯದಲ್ಲಿ ಪರಿಣಿತಿ ಸಾಧಿಸಿರಬೇಕು, ಸಂವಹನ ಕಲೆಯನ್ನು ಕರಗತ ಮಾಡಿಕೊಂಡಿರಬೇಕು ಹಾಗೂ ಮೌಲ್ಯಯುತವಾದ ಜೀವನವನ್ನು ನಡೆಸುತ್ತಾ ಸೇವೆ ಸಾರ್ಥಕವಾಗುವಂತಿರಬೇಕು ಎಂದು ಹೇಳಿದರು. ಇಂತಹ ಎಲ್ಲ ಗುಣಗಳನ್ನು ಪ್ರೊ.ಬಿ.ಬಿ.ಕಡ್ಲಿಯವರು ಮೈಗೂಡಿಸಿಕೊಂಡಿದ್ದರಿಂದ ಅವರು ಉತ್ತಮ ಪ್ರಾಧ್ಯಾಪಕರಾಗಲು ಸಾಧ್ಯವಾಯಿತು. ಅವರ ಸೇವೆಯನ್ನು ನಮ್ಮ ಸಂಸ್ಥೆ ಸದಾ ಸ್ಮರಿಸುತ್ತದೆ ಎಂದು ತಮ್ಮ ಅಧ್ಯಕ್ಷೀಯ ಸಮಾರೋಪದ ಮಾತುಗಳ ಮೂಲಕ ಹೇಳಿದರು. ಡಾ.ತಿಪ್ಪೇಸ್ವಾಮಿ ಡಿ.ಎಸ್., ಡಾ.ಎಂ.ಬಿ.ಒಂಟಿ, ಲೆಫ್ಟಿನೆಂಟ್ ಎಸ್.ಬಿ.ಚಳಗೇರಿ, ವಿಶ್ರಾಂತ ಪ್ರಾಚಾರ್ಯರಾದ ಪ್ರೊ.ಬಿ.ಎಂ.ಚಲವಾದಿ, ಗ್ರಂಥಪಾಲಕರಾದ ಶ್ರೀ.ಎಸ್.ಎಸ್.ಕಡಿವಾಲ ಅವರು ಪ್ರೊ.ಬಿ.ಬಿಕಡ್ಲಿಯವರ ಜೊತೆಗಿನ ಒಡನಾಟದೊಂದಿಗೆ, ಬೋಧನಾ ಶೈಲಿ, ಸಮಯಪ್ರಜ್ಞೆ, ಮಾರ್ಗದರ್ಶನ, ವಿಷಯ ಪ್ರಾವಿಣ್ಯತೆ, ಹೊಂದಾಣಿಕೆಯ ಮೌಲ್ಯಗಳನ್ನು ಸ್ಮರಿಸಿಕೊಂಡರು. ಉಪಸ್ಥಿತರಿದ್ದ ಪ್ರಾಚಾರ್ಯರಾದ ಶಶಿಕಲಾ ಮಠ ಅವರು ತಮ್ಮ ಸಹದ್ಯೋಗಿಯಾಗಿ ನೇಮಕಗೊಂಡ ಇಲ್ಲಿಯವರೆಗಿನ ಅವರೊಂದಿಗಿನ ಸೇವಾ ಅನುಭವಗಳನ್ನು ಹಂಚಿಕೊಂಡು ಮಾತನಾಡುತ್ತಾ ಇದೊಂದು ಭಾವನಾತ್ಮಕ ಸಂದರ್ಭವಾದರೂ ಸರ್ಕಾರಿ ಆದೇಶದ ಪ್ರಕಾರ ನಿವೃತ್ತಿಯಾಗುವುದು ಅನಿವಾರ್ಯ ಅವರು ಸೇವೆಯಿಂದ ನಿವೃತ್ತರಾಗಿದ್ದಾರೆಯೇ ವಿನಃ ಜ್ಞಾನ ದಾಸೋಹದಿಂದ ನಿವೃತ್ತರಾಗುವುದಿಲ್ಲ ಎಂದು ಹೇಳಿದರು. ಸನ್ಮಾನಿತರಾದ ಪ್ರೊ.ಬಿ.ಬಿ.ಕಡ್ಲಿಯವರು ತಮ್ಮ 35 ವರ್ಷಗಳ ಸುಧೀರ್ಘ ಸೇವಾ ದಿನಗಳನ್ನು ನೆನಪಿಸಿಕೊಳ್ಳುತ್ತಾ ತಮ್ಮ ಶೈಕ್ಷಣಿಕ ಮತ್ತು ವೃತ್ತಿಸೇವೆಯಲ್ಲಿ ನೆರವಾದ ಸರ್ವರಿಗೂ ಕೃತಜ್ಞತೆಯನ್ನು ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಬಿ.ಬಿ.ಕಡ್ಲಿಯವರು ಶಿಷ್ಯಬಳಗ, ವಿಶ್ರಾಂತ ಪ್ರಾಧ್ಯಾಪಕರು, ಮತ್ತು ಬಂಧುಗಳು ಸನ್ಮಾನಿಸಿದರು. ಡಾ.ಎಸ್.ಆರ್.ಗೋಲಗೊಂಡ ಸ್ವಾಗತಿಸಿ, ನಿರೂಪಿಸಿದರು, ಪ್ರೊ.ಬಿ.ಎ.ಕಂಠಿ ವಂದಿಸಿದರು.

ದಿ: 31-05-2022

Coordinator
IQAC
Vijaya Mahantesh Krupapohit S.R.Vastrad
Arts, Science & Vijay Shankarappa Bellihal
Commerce College Hungund-587118
Dist:Bagalkote State:Karnataka

PRINCIPAL
Vijaya Mahantesh Kurpaposhit
S.R.Vastrad Arts, Science And Vijay
Shankarappa Bellihal Commerce College
Hungund-587118 (Dist Bagalkot-Karnataka